# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 171 (252)
ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 16.07.2024
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗಳ ಮೂಲಕ ನಿವೇಶನಗಳ ಏಕ/ಬಹು ನಿವೇಶನ ವಿನ್ಯಾಸಗಳ ಅನುಮೋದನೆ ಇರುವ ನಿಯಮಗಳು ಯಾವುವು; ಭೂಪರಿವರ್ತಿತ ನಿವೇಶನ ವಸತಿ ಯೋಜನೆ ಮನೆ & ನಿವೇಶನ ಹಕ್ಕು ಪತ್ರ 94ಸಿ, 94ಸಿಸಿ ಸಹಿತ ಇತರ ನಿವೇಶನಗಳಿಗೆ ಅನ್ವಯಿಸುವ ನಿಯಮಗಳ ವಿವರ ನೀಡುವುದು; | ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1961 ರ ಕಲಂ 4-k ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕೈಪಿಡಿ ಸಂಖ್ಯೆ: ಗ್ರಾಆಪ 86 ಆಗ್ರಾಪಂ 2014, ದಿನಾಂಕ: 11-11-2014 ನ್ನು ಹಾಗೂ ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸುವ ಸುತ್ತೋಲೆಗಳನ್ನು ಅನುಸರಿಸಲಾಗುತ್ತದೆ.<br><br>ಭೂಪರಿವರ್ತಿತ ನಿವೇಶನ, ವಸತಿ ಯೋಜನೆ ಮನೆ & ನಿವೇಶನ ಹಕ್ಕು ಪತ್ರ 94ಸಿ, 94ಸಿಸಿ ಸಹಿತ ಇತರ ನಿವೇಶನಗಳಿಗೆ ಅನ್ವಯಿಸುವ ನಿಯಮಗಳು ಈ ಇಲಾಖೆಗೆ ಸಂಬಂಧಿಸಿರುವುದಿಲ್ಲ. |
| (ಆ) | ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಕೆಯಾಗುವ ವಿನ್ಯಾಸಗಳ ಅನುಮೋದನೆಯ ಅರ್ಜಿಗೆ ವಿಲೆವಾರಿ ಮಾಡಲು ಅಗತ್ಯವಿರುವ ಅವಧಿ ಎಷ್ಟು; ಇದಕ್ಕೆ ಅಗತ್ಯವಿರುವ ಸಿಬ್ಬಂದಿ ಮತ್ತು ಕಛೇರಿ ವ್ಯವಸ್ಥೆಯ ಬಗ್ಗೆ ಇಲಾಖೆ ಏನು ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲಾಗಿದೆ; ಈ ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತರಲಾಗಿದೆಯೇ; ತಂದಿದ್ದರೆ ಸರ್ಕಾರ ಕೈಗೊಂಡ ಕ್ರಮಗಳು ಯಾವುವು; ತಾಲ್ಲೂಕು ಮಟ್ಟದಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಕಛೇರಿ ತೆರೆಯಲು ಕಾಯಿದೆಗೆ ತಿದ್ದುಪಡಿ ತರಲು ಸರ್ಕಾರ ಚಿಂತಿಸಿದೆಯೇ; | ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಗೆ ಸಂಬಂಧಿಸಿದಂತೆ ಕರ್ನಾಟಕ ನಗರ ಯೋಜನಾ ಪ್ರಾಧಿಕಾರದ ನಿಯಮಾವಳಿಯ 1965 ನಿಯಮ 36 ರಡಿಯಂತೆ 90 ದಿನಗಳು ಇರುತ್ತದೆ.<br><br>ಜಿಲ್ಲಾ ಮಟ್ಟದ ಎಲ್ಲಾ ಕಛೇರಿಗಳಲ್ಲಿ, ಕಛೇರಿ ಮುಖ್ಯಸ್ಥರಾಗಿ ಸಹಾಯಕ ನಿರ್ದೇಶಕರು ಕಾರ್ಯ ನಿರ್ವಹಿಸುತ್ತಿದ್ದು, ಅವರೊಂದಿಗೆ ತಾಂತ್ರಿಕ ಸಿಬ್ಬಂದಿ ಉಪಯೋಗಿಸಿಕೊಂಡು ಕಛೇರಿಯ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ.<br><br>ತಾಲ್ಲೂಕು ಮಟ್ಟದಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಕಛೇರಿ ತೆರೆಯುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |
| (ಇ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ನ್ಯಾಯಾಲಯದ ಆದೇಶವಾದ ನಂತರ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಗ್ರಾಮ ಪಂಚಾಯಿತಿಗಳಿಂದ ಕ್ರಮವಾಗಿ ಸಲ್ಲಿಕೆಯಾಗಿರುವ ಏಕ ನಿವೇಶನ ಹಾಗೂ ಬಹುನಿವೇಶನ ಬಡಾವಣೆ ಅನುಮೋದನೆಯ ಅರ್ಜಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ವಿಲೇವಾರಿಯಾದ ಅರ್ಜಿಗಳ ಸಂಖ್ಯೆ ಎಷ್ಟು; ತಿರಸ್ಕೃತವಾದ ಅರ್ಜಿಗಳೆಷ್ಟು; ತಿರಸ್ಕೃತೆಗೆ ಕಾರಣವೇನು; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಗಳ ಗ್ರಾಮ ಪಂಚಾಯಿತಿಗಳಿಂದ 2023-24 ನೇ ಸಾಲಿನಲ್ಲಿ ಏಕ ನಿವೇಶನ .ಹಾಗೂ ಬಹುನಿವೇಶನ ಬಡಾವಣೆ ಅರ್ಜಿಗಳ ವಿವರಗಳು:-<br>➢ ಸ್ವೀಕೃತವಾದ ಅರ್ಜಿಗಳ ಸಂಖ್ಯೆ: 259<br>➢ ವಿಲೇವಾರಿಯಾದ ಅರ್ಜಿಗಳು:-<br>1. ವಿನ್ಯಾಸ ಅನುಮೋದನೆ : 53<br>2. ಹಿಂಬರಹ:161<br>➢ ತಿರಸ್ಕೃತವಾದ ಅರ್ಜಿಗಳ ಸಂಖ್ಯೆ: 45<br><br>ದಕ್ಷಿಣ ಕನ್ನಡ ಜಿಲ್ಲೆಗಳ ಗ್ರಾಮ ಪಂಚಾಯಿತಿಗಳಿಂದ 2024-25 ನೇ ಸಾಲಿನಲ್ಲಿ (ಜೂನ್ 30ರ ವರೆಗಿನ) ಏಕ ನಿವೇಶನ ಹಾಗೂ |

| | | |
|---|---|---|
| | | ಬಹುನಿವೇಶನ ಬಡಾವಣೆ ಅರ್ಜಿಗಳ ವಿವರಗಳು:-<br>➢ ಸ್ವೀಕೃತವಾದ ಅರ್ಜಿಗಳ ಸಂಖ್ಯೆ: 397<br>➢ ವಿಲೇವಾರಿಯಾದ ಅರ್ಜಿಗಳು:-<br>1. ವಿನ್ಯಾಸ ಅನುಮೋದನೆ : 29<br>2. ಹಿಂಬರಹ: 245<br>3. ಪರಿಶೀಲನಾ ಹಂತದಲ್ಲಿರುವ ಅರ್ಜಿಗಳ ಸಂಖ್ಯೆ: 65 (ನಿಗಧಿತ ಅವಧಿಯೊಳಗಿನ)<br>➢ ತಿರಸ್ಕೃತವಾದ ಅರ್ಜಿಗಳ ಸಂಖ್ಯೆ: 58<br><br>ಉಡುಪಿ ಜಿಲ್ಲೆಗಳ ಗ್ರಾಮ ಪಂಚಾಯತಿಗಳಿಂದ 2023-24 ನೇ ಸಾಲಿನಲ್ಲಿ ಏಕ ನಿವೇಶನ ಹಾಗೂ ಬಹುನಿವೇಶನ ಬಡಾವಣೆ ಅನುಮೋದನೆಯ ಅರ್ಜಿಗಳ ಸಂಖ್ಯೆ: 398<br>➢ ವಿಲೇವಾರಿಯಾದ ಅರ್ಜಿಗಳು;<br>1. ವಿನ್ಯಾಸ ಅನುಮೋದನೆ : 293<br>2. ಹಿಂಬರಹ: 103<br>➢ ತಿರಸ್ಕೃತವಾದ ಅರ್ಜಿಗಳ ಸಂಖ್ಯೆ: 2<br><br>**ದಾಖಲೆಗಳನ್ನು ಸಲ್ಲಿಸದ ಕಾರಣ ಕಡತವನ್ನು ತಿರಸ್ಕರಿಸಲಾಗಿದೆ.**<br><br>ಉಡುಪಿ ಜಿಲ್ಲೆಗಳ ಗ್ರಾಮ ಪಂಚಾಯತಿಗಳಿಂದ 2024-25 ನೇ ಸಾಲಿನಲ್ಲಿ ಏಕ ನಿವೇಶನ ಹಾಗೂ ಬಹುನಿವೇಶನ ಬಡಾವಣೆ ಅನುಮೋದನೆಯ ಅರ್ಜಿಗಳ ಸಂಖ್ಯೆ: 86<br>➢ ವಿಲೇವಾರಿಯಾದ ಅರ್ಜಿಗಳು;<br>1. ವಿನ್ಯಾಸ ಅನುಮೋದನೆ : 28<br>2. ಹಿಂಬರಹ: 58<br>➢ ತಿರಸ್ಕೃತವಾದ ಅರ್ಜಿಗಳ ಸಂಖ್ಯೆ: 0<br>**(ವಿವರಗಳನ್ನು ಅನುಬಂಧದಲ್ಲಿರಿಸಿದೆ)** |
| (ಈ) | ಕರಾವಳಿ ಜಿಲ್ಲೆಗಳಲ್ಲಿ ಕಂದಾಯ ಇಲಾಖೆಯು ಭೂಪರಿವರ್ತನೆಯ ಹಿಂಬರಹದಲ್ಲಿ ನಿವೇಶನಕ್ಕೆ ಸಂಪರ್ಕ ರಸ್ತೆಯೆಂದು ದಾಖಲಿಸುತ್ತಿದ್ದು, ರಸ್ತೆ ಯಾವುದೇ ಸಕ್ಷಮ ಪ್ರಾಧಿಕಾರಕ್ಕೆ ಹಸ್ತಾಂತರವಾಗದ ಮತ್ತು ಕಿರಿದಾದ ರಸ್ತೆಯ ಹಿನ್ನೆಲೆಯಲ್ಲಿ ಬಡಾವಣೆ ಅನುಮೋದನೆ ಅರ್ಜಿಗಳು ತಿರಸ್ಕೃತವಾಗುತ್ತಿರುವುದು ಮತ್ತು ಜನ ಸಾಮಾನ್ಯರು ತೊಂದರೆಗೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?(ವಿವರ ನೀಡುವುದು) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕೈಪಿಡಿ ಸಂಖ್ಯೆ: ಗ್ರಾಅಪ 86 ಆಗ್ರಾಪಂ 2014, ದಿನಾಂಕ: 11-11-2014 ರ ಕ್ರಮ ಸಂಖ್ಯೆ: 1.2.9 ಮತ್ತು 2.2.8 ರಲ್ಲಿ ಪ್ರಶ್ನಿತ ಜಮೀನು ಸೂಕ್ತವಾದ ಸಾರ್ವಜನಿಕ ರಸ್ತೆ ಸಂಪರ್ಕ ಹೊಂದಿರತಕ್ಕದ್ದು. (NH/SH/MDR/ODR/Village Road ಅಥವಾ ಅನುಮೋದಿತ ವಿನ್ಯಾಸದಲ್ಲಿನ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿದ ರಸ್ತೆ ಅಥವಾ ಅಭಿವೃದ್ಧಿ ಹೊಂದಿದ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿದ ಒಳರಸ್ತೆ) ಎಂದು ತಿಳಿಸಿದ್ದು, ಪ್ರಸ್ತಾಪಿತ ಜಮೀನು ಅಂತಹ ರಸ್ತೆ ಸಂಪರ್ಕವಿಲ್ಲದಿದ್ದಲ್ಲಿ ಪ್ರಸ್ತಾವನೆಯನ್ನು ತಿರಸ್ಕರಿಸಲಾಗುತ್ತದೆ. |

ಕಡತ ಸಂಖ್ಯೆ: ನಅಇ 247 ಮೈಅಪ್ರಾ 2024

(ಬಿ.ಎಸ್.ಸುರೇಶ್)

ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು.

## ಅನುಬಂಧ

| | |
|---|---|
| **ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು** | |
| **2023-24ನೇ ಸಾಲಿನ ವಿವರ:** | |
| ಸ್ವೀಕೃತಿಯಾದ ಅರ್ಜಿಗಳು | 259 |
| ವಿಲೇವಾರಿಯಾದ ಅರ್ಜಿಗಳು<br>• ವಿನ್ಯಾಸ ಅನುಮೋದನೆ<br>• ಹಿಂಬರಹ<br>• ಒಟ್ಟು | <br>53<br>61<br>214 |
| ತಿರಸ್ಕೃತವಾದ ಅರ್ಜಿಗಳು* | 45 |
| **2024-25ನೇ ಸಾಲಿನ ವಿವರ:** | |
| ಸ್ವೀಕೃತಿಯಾದ ಅರ್ಜಿಗಳು | 397 |
| ವಿಲೇವಾರಿಯಾದ ಅರ್ಜಿಗಳು<br>• ವಿನ್ಯಾಸ ಅನುಮೋದನೆ<br>• ಹಿಂಬರಹ<br>• ಒಟ್ಟು | <br>29<br>245<br>274 |
| ಪರಿಶೀಲನಾ ಹಂತದಲ್ಲಿರುವ ಅರ್ಜಿಗಳು | 65 |
| ತಿರಸ್ಕೃತವಾದ ಅರ್ಜಿಗಳು* | 58 |
| **ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ** | |
| **2023-24ನೇ ಸಾಲಿನ ವಿವರ:** | |
| ಸ್ವೀಕೃತಿಯಾದ ಅರ್ಜಿಗಳು | 398 |
| ವಿಲೇವಾರಿಯಾದ ಅರ್ಜಿಗಳು<br>• ವಿನ್ಯಾಸ ಅನುಮೋದನೆ<br>• ಹಿಂಬರಹ<br>• ಒಟ್ಟು | <br>293<br>103<br>396 |
| ತಿರಸ್ಕೃತವಾದ ಅರ್ಜಿಗಳು* | 02 |
| **2024-25ನೇ ಸಾಲಿನ ವಿವರ:** | |
| ಸ್ವೀಕೃತಿಯಾದ ಅರ್ಜಿಗಳು | 86 |
| ವಿಲೇವಾರಿಯಾದ ಅರ್ಜಿಗಳು<br>• ವಿನ್ಯಾಸ ಅನುಮೋದನೆ<br>• ಹಿಂಬರಹ<br>• ಒಟ್ಟು | <br>28<br>58<br>86 |
| ತಿರಸ್ಕೃತವಾದ ಅರ್ಜಿಗಳು | 00 |

* ದಾಖಲೆಗಳನ್ನು ಸಲ್ಲಿಸದ ಕಾರಣ ಕಡತವನ್ನು ತಿರಸ್ಕರಿಸಲಾಗಿದೆ.